ನಡೆಯಿತು. ಆಸ್ಟ್ರೇಲಿಯಾ ತಂಡದ ರೋಚಕ ಗೆಲುವನ್ನು ಸಂಭ್ರಮಿಸಲು ಶೇನ್ ವಾರ್ನ್ ಕೂಡಾ ಅತಿಥಿ ತಂಡದ ಬಾಲ್ಕನಿಯಲ್ಲಿ ಗಂಗೂಲಿಯಂತೆ ಅಂಗಿ ಕಳಚಿ ಎಸೆದಿದ್ದ. ಆಮೇಲೆ ಕೆಲವರು ಈ ಬಾಲ್ಕನಿಯನ್ನು 'ವಾರ್ನ್ ಬಾಲ್ಕನಿ' ಎಂತಲೂ ಕರೆಯತೊಡಗಿದ್ದರು.

ಹೀಗೆ ಕ್ರಿಕೆಟ್ ಚರಿತ್ರೆಯ ಮಹಾಸಂಪುಟವನ್ನು ತನ್ನೊಳಗೆ ಹುದುಗಿಸಿಕೊಂಡಿರುವ ಲಾರ್ಡ್ಸ್ ಮೈದಾನಕ್ಕೆ ಇಂಗ್ಲೆಂಡಿನ ಚರಿತ್ರೆಯಲ್ಲಿಯೂ ವಿಶಿಷ್ಟ ಪಾಲುದಾರಿಕೆ ಇದೆ. ಇತಿಹಾಸದ ಜೊತೆಗೆ ಸಣ್ಣ ಸಂಬಂಧ ಹೊಂದಿದ ವಸ್ತುವನ್ನೂ ವಿಷಯವನ್ನೂ ವೈಭವೀಕರಿಸಿ ಪ್ರವಾಸೋದ್ಯಮದಲ್ಲಿ ಸೇರಿಸಿಕೊಳ್ಳುವ ಇಂಗ್ಲೆಂಡಿನಲ್ಲಿ, ಕ್ರಿಕೆಟಿನ ಜನಪ್ರಿಯತೆ ಕುಗ್ಗಿದ್ದರೂ ಲಂಡನ್ ಪ್ರವಾಸೋದ್ಯಮದ ನಕ್ಷೆಯಲ್ಲಿ ಲಾರ್ಡ್ಸ್ ಮೈದಾನಕ್ಕೆ ವಿಶೇಷ ಗುರುತು ಇದೆ. ಈ ಗುರುತಿನ ಬೆನ್ನು ಹಿಡಿದು ದುಬಾರಿ ಎಂದು ತೋರುವ ಟಿಕೇಟು ಪಡೆದು ಮೈದಾನದ ಒಳ ನಡೆದರೆ ಅಲ್ಲೊಬ್ಬ ಗೈಡ್, ಲಾರ್ಡ್ಸ್ ಒಳಗೆಲ್ಲ ಸುತ್ತಾಡಿಸಿ ಗೋಡೆ ಫಲಕ ಮತ್ತು ಮೈದಾನದ ಕಂಬ, ಕಿಟಕಿಗಳ ಇತಿಹಾಸ ಕಥೆ ಹೇಳಿ ನಿಮ್ಮನ್ನು ರಂಜಿಸುತ್ತಾನೆ. ಮತ್ತೆ ಲಾರ್ಡ್ಸ್ ಒಳಗಿನ ಅಂಗಡಿಯಲ್ಲಿ ನಮ್ಮ ನಮ್ಮ ರುಚಿಗೆ ಮತ್ತು ನಮ್ಮ ಕಿಸೆಗೆ ತಕ್ಕಂತೆ ದೊರೆಯುವ ಸ್ಮರಣಿಕೆಗಳ ಕಡೆಗೂ ಗಮನವನ್ನು ಸೆಳೆಯುತ್ತಾನೆ. ಲಾರ್ಡ್ಸ್ ಮೈದಾನಕ್ಕೆ ಇನ್ನಷ್ಟು ಮುಜುಗರ ಹುಟ್ಟಿಸುತ್ತಾನೆ.

ಒಟ್ಟಿನಲ್ಲಿ ಲಾರ್ಡ್ಸ್‌ನ ಹಳೆಯ ವೈಭವವನ್ನು ಮೆಲುಕು ಹಾಕುತ್ತ ಗೈಡ್‌ನ ಹಿಂದೆಯೇ ಕೈ ಕಟ್ಟಿಕೊಂಡು ದೂರದೂರದ ಪ್ರವಾಸಿ ಕ್ರಿಕೆಟ್ ಪ್ರೇಮಿಗಳು ಹಿಂಬಾಲಿಸುವಾಗ, ಬಹುಶಃ ಲಾರ್ಡ್ಸ್ ಒಂದು ನಿಟ್ಟುಸಿರುಬಿಡುತ್ತದೆ, ಕ್ಯಾಮೆರಾ ಹಿಡಿದು ಮೈದಾನದ ವಿವಿಧ ದಿಕ್ಕುದೆಸೆಗಳ ಭಂಗಿಗಳ ಛಾಯಾಚಿತ್ರ ತೆಗೆಯಹೊರಟವರಿಗೂ ಲಾರ್ಡ್ಸ್ ಮೈದಾನವು ಮನದುಂಬಿ ನಕ್ಕಿದ್ದನ್ನು ಕ್ಲಿಕ್ಕಿಸುವುದು ಸಾಧ್ಯ ಆಗಲಿಕ್ಕಿಲ್ಲ.

ಪ್ರೇಮಿಗಳಿಗೆ ಕಾಶ್ಮೀರದ ಕಣಿವೆಯಲ್ಲೋ, ಸ್ವಿಟ್ಜರ್ಲೆಂಡಿನ ಹಿಮಶಿಖರದಲ್ಲೋ ಸಿಗುವ ರೋಮಾಂಚನವನ್ನು ಲಾರ್ಡ್ಸ್ ಮೈದಾನ ಕ್ರಿಕೆಟ್ ಆಟಗಾರರಿಗೆ, ಪ್ರೇಕ್ಷಕರಿಗೆ ನೀಡುತ್ತಲೇ ಬಂದಿದೆ. ಕ್ರಿಕೆಟ್ ಆಟಗಾರರು ಪಂದ್ಯವೊಂದರಲ್ಲಿ ಶತಕವನ್ನೋ ಅಥವಾ ಐದು ವಿಕೆಟುಗಳನ್ನೋ ಪಡೆದು ಅಲ್ಲಿನ ಶಾಶ್ವತ ಫಲಕದಲ್ಲಿ ತಮ್ಮ ಹೆಸರು ಸೇರಿದರೆ ತಮ್ಮ ಕ್ರೀಡಾ ಜನುಮಕ್ಕೆ ಮೋಕ್ಷ ಸಿಕ್ಕಿದವರಂತೆ ಖುಷಿ ಪಡುತ್ತಾರೆ. ಕ್ರಿಕೆಟಿನ ಅಪ್ಪಟ ಪ್ರೇಮಿಗಳು ಲಾರ್ಡ್ಸ್ ಅಲ್ಲಿ ಕುಳಿತು ಒಂದು ಪಂದ್ಯವನ್ನಾದರೂ ನೋಡಬೇಕೆಂದು ಕನಸು ಕಾಣುತ್ತಾರೆ. ಕೋಟ್ಯಂತರ ಜನರ ತಲೆಯಲ್ಲಿ ಗುಂಯ್ ಗುಂಯ್ ಗುಟ್ಟುವ ಇಂತಹ ಕನವರಿಕೆಗೆ ತಾನೇ ಕಾರಣ ಎನ್ನುವ ಹೆಮ್ಮೆಯಲ್ಲಿದ್ದ ಲಾರ್ಡ್ಸ್, ತವರಿನ ತಂಡದ ಕಳಪೆ ಸಾಧನೆ, ವಿಮುಖರಾದ ಅಭಿಮಾನಿಗಳು ಮತ್ತೆ ಕರಗುತ್ತಿರುವ ಆಸಕ್ತಿ, ಜನಪ್ರಿಯತೆಗಳಿಂದ ಸೊರಗಿ ಹೋಗಿದೆ.

ಇಂಗ್ಲೆಂಡಿನ ಕ್ರಿಕೆಟ್ ಮತ್ತೆ ತನ್ನ ವೈಭವದ ದಿನಗಳನ್ನು ಮತ್ತು ಯಶಸನ್ನು ಕಂಡುಕೊಳ್ಳುತ್ತದೋ ಇಲ್ಲವೋ, ಹೊಸ ಕ್ರಿಕೆಟ್ ಹೀರೋಗಳ ಫೋಟೊಗಳು ಚಿಣ್ಣರ ಬ್ಯಾಟುಗಳ ಮೇಲೆ, ಶಾಲಾ ಪುಸ್ತಕದ ಒಳಪುಟಗಳಲ್ಲಿ ಅವಿತು ಮಂದಹಾಸ ಬೀರುತ್ತವೋ ಇಲ್ಲವೋ, ಆದರೆ ಕ್ರಿಕೆಟ್ ಎನ್ನುವುದು ದೇಹ ಮನಸುಗಳಿಗೆ ಉಲ್ಲಾಸ ಆರೋಗ್ಯ ತರುವ ಕ್ರೀಡೆಯಾಗಿ ಉಳಿಯಲಿ ಎಂದು ಕ್ರಿಕೆಟಿನ ತವರು ಆಶಿಸುತ್ತಿರಬಹುದು. ಜನಪ್ರಿಯತೆಯ ಉತ್ತುಂಗದಲ್ಲಿರುವ ಫುಟ್ಬಾಲ್, ಕ್ರೀಡೆಯ ಆಯ ಆಕಾರ ಗಾತ್ರವನ್ನು ಮೀರಿ ಬೆಳೆದ ಬಲಿಷ್ಠ ದೊಡ್ಡ ಉದ್ಯಮವಾದ ಈ ಹೊತ್ತಿನಲ್ಲಿ, ಕ್ರಿಕೆಟ್ ಕೂಡ ಶುದ್ಧ ಮಾರುಕಟ್ಟೆಯಾಗಿ ಬದಲಾಗುತ್ತಿರುವುದು, ಇಂಗ್ಲೆಂಡ್‌ನ ಮೈದಾನಗಳಲ್ಲಿ ಕ್ರಿಕೆಟನ್ನು ಆಸ್ವಾದಿಸುವ ಆಂಗ್ಲ ಪ್ರೇಕ್ಷಕರು ಬಹಳ ಕಡಿಮೆ ಇದ್ದರೂ ಜಗತ್ತಿನ ಮೈದಾನದಲ್ಲಿ ಕ್ರಿಕೆಟ್ ದಿನನಿತ್ಯದ ವ್ಯಾಪಾರವಾಗಿ ಬಹಳ ಬೇಗ ಬೆಳೆಯುತ್ತಿರುವುದು, ಲಾರ್ಡ್ಸ್‌ನ ಕಳವಳವನ್ನು ಹೆಚ್ಚಿಸುತ್ತಿರಬಹುದು.

ಇಷ್ಟರಲ್ಲೇ ಕ್ರಿಕೆಟಿನ ತವರುಮನೆಯ ಮೊದಮೊದಲಿನ ಕಸಿವಿಸಿ ಮುನಿಸುಗಳು ಬೇಸರವೂ ಆಗಿ ಪರಿವರ್ತನೆ ಹೊಂದಿರಬಹುದು. ಲಾರ್ಡ್ಸ್‌ನ ಮೋಹಕ ಹಸಿರು ಸೆರಗಿನ ತುದಿಯಲ್ಲಿ ಗಂಟುಗಳು ಒಂದು ಎರಡು ಮೂರು... ಇನ್ನೂ ಹೆಚ್ಚಿರಬಹುದು.

●